# ಎಲ್ಲಕ್ಕಿಂತ ಕುಟುಂಬ ದೊಡ್ಡದು



**ಕೌಸ್ತುಭ**
**ಕಲರ್ಸ್ ಕನ್ನಡದ 'ನನ್ನರಸಿ ರಾಧೆ'ಯ ಇಂಚರ**

**◆ ನಟನೆ ಜೊತೆ ಇನ್ನೇನು ಮಾಡುತ್ತಿದ್ದೀರಿ?**

ಬೆಂಗಳೂರಿನ ಹುಡುಗಿ ನಾನು. ಇದಕ್ಕಿಂತ ಮುಂಚೆ ಹಣಕಾಸಿಗೆ ಸಂಬಂಧಿಸಿದ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೆ. ಇದೇ ನನ್ನ ಮೊದಲ ಧಾರಾವಾಹಿ. ವಾರಾಂತ್ಯದಲ್ಲಿ ಎಂಬಿಎ ಅಧ್ಯಯನ ಮಾಡುತ್ತಿದ್ದೇನೆ. ನನಗೆ ನಟನೆ–ನೃತ್ಯದ ಬಗ್ಗೆ ಆಸಕ್ತಿಯೇನೂ ಇರಲಿಲ್ಲ. ನಮ್ಮ ಕುಟುಂಬ ವರ್ಗದಲ್ಲಿ ಯಾರೊಬ್ಬರೂ ಈ ಕ್ಷೇತ್ರದಲ್ಲಿ ಇಲ್ಲ. ನಮ್ಮ ಮನೆತನದಲ್ಲಿ ಓದಿಗೆ ಹೆಚ್ಚು ಒತ್ತು ಕೊಡುತ್ತಿದ್ದರು. ಆಕಸ್ಮಿಕವಾಗಿ ನಾನು ಇಲ್ಲಿ ಪ್ರವೇಶ ಮಾಡಿದ್ದೇನೆ. ಯಾವತ್ತೂ ಪ್ರಯತ್ನ ಮಾಡದೇ ಇದ್ದರೂ ಅವಕಾಶ ನನ್ನನ್ನು ಅರಸಿ ಬಂದಿದೆ ಅಂದರೆ ನಾನೇ ಅದೃಷ್ಟವಂತೆ ಎಂದು ಅನ್ನಿಸುತ್ತದೆ.

**◆ ನಿಮ್ಮ ಭವಿಷ್ಯ ಇಲ್ಲವೇ ಶಿಕ್ಷಣದ ಮೇಲೆ ಬಣ್ಣದ ಲೋಕ ನಕಾರಾತ್ಮಕ ಪರಿಣಾಮ ಉಂಟುಮಾಡಬಹುದು ಎಂದು ಅನ್ನಿಸಿತ್ತಾ?**

ಬಣ್ಣದ ಜಗತ್ತಿನ ಬಗ್ಗೆ ಕೇಳಿ ಮಾತ್ರ ಗೊತ್ತಿತ್ತು. ಹಾಗಾಗಿ ಸಹಜವಾಗಿ ಸಣ್ಣ ಭೀತಿಯಿಂದಲೇ ಈ ಲೋಕದತ್ತ ಹೆಜ್ಜೆ ಊರಿದ್ದೇನೆ. ಮನೆಯಲ್ಲೂ ಪೋಷಕರು ಮನಪೂರ್ವಕವಾಗಿ ಕಳಿಸಲಿಲ್ಲ. ಅವರಿಗೆ ಸಣ್ಣ ಹಿಂಜರಿಕೆ ಇತ್ತು. ಅರೆಮನಸ್ಸಿನಲ್ಲಿ ನಿರ್ಮಾಪಕರ ಜೊತೆ ಮಾತಾಡಿದ ನಂತರವೇ ನನ್ನ ಹೊಸ ಕೆಲಸವನ್ನು ಬೆಂಬಲಿಸಿದರು. ಹೊಸ ಅನುಭವ, ಹಾಗಾಗಿ ಕಲಿತುಕೊಳ್ಳುವ ಸಂಗತಿಗಳು ಹೆಚ್ಚಿವೆ ಎನ್ನುವ ಆತಂಕವೂ ಇತ್ತು. ಏನೇ ಮಾಡಿದರೂ ಚೆನ್ನಾಗಿ ಮಾಡಬೇಕು ಎನ್ನುವ ಮನೋಭಾವ ಇರುವುದರಿಂದ ಅದು ಮನಸ್ಸಿಗೆ ಒತ್ತಡವನ್ನು ಹಾಕುತ್ತಿತ್ತು. ದಿನಗಳೆದಂತೆ ನನ್ನಲ್ಲೂ ಭರವಸೆ ಬಂತು. ಈಗ ತೊಂದರೆಯೇನೂ ಇಲ್ಲ. ನನ್ನ ಯೋಚನೆಯಲ್ಲಿ ಚೆನ್ನಾಗಿ ಮಾಡಬೇಕು ಎನ್ನುವ ಬಯಕೆ ಇತ್ತು. ಅದನ್ನು ಮಾಡುತ್ತಿದ್ದೇನೆ. ಬೇರೆ ಇನ್ನೇನೂ ತೊಂದರೆ ಇಲ್ಲ. ಕಾಲೇಜು ವಾರಾಂತ್ಯದಲ್ಲಿ ಇರುವುದುರಿಂದ ಅದಕ್ಕೂ ತೊಂದರೆ ಆಗುವುದಿಲ್ಲ.

**◆ ಎಂಬಿಎ ಮುಗಿದ ನಂತರ ದೊಡ್ಡ ಹುದ್ದೆ ಸಿಕ್ಕರೆ ಏನು ಮಾಡುತ್ತೀರಿ?**

ಸದ್ಯ ಅಂತಹ ಸಂದರ್ಭ ಬರುತ್ತದೆ ಎಂದು ನಾನು ಅಂದುಕೊಂಡಿಲ್ಲ. ಈ ಹಿಂದೆ ಕೂಡ ನಾನು ಕ್ಯಾಂಪಸ್ ಸಂದರ್ಶನದಲ್ಲಿಯೇ ಕಾರ್ಪೊರೇಟ್ ಕಂಪನಿಯೊಂದರ ಕೆಲಸಕ್ಕೆ ಆಯ್ಕೆಯಾಗಿದ್ದೆ. ಒಂದೂವರೆ ವರ್ಷ ಅಲ್ಲಿ ಕೆಲಸವನ್ನೂ ಮಾಡಿದ್ದೇನೆ. ಹೊಸತನ್ನು ಇಷ್ಟಪಟ್ಟು ಇಲ್ಲಿಗೆ ಬಂದಿದ್ದೇನೆ ಅಂದರೆ, ಇಲ್ಲೇ ಇರುತ್ತೇನೆ ಎಂದು ಅನ್ನಿಸುತ್ತದೆ. ಮುಂದಿನ ಬಗ್ಗೆ ಗೊತ್ತಿಲ್ಲ. ಬಹುಶಃ ನಟನೆಯನ್ನೇ ಮುಂದುವರಿಸುತ್ತೇನೆ. ನನ್ನ ತಂದೆ ಮೊದಲು ಕೌಟುಂಬಿಕ ಬದುಕು, ನಂತರ ವೃತ್ತಿ ಎಂದು ಹೇಳುತ್ತಾರೆ. ಅದು ನಿಜ ಕೂಡ ಹೌದು. ನಟಿಯಾಗಿಯೇ ಮುಂದುವರಿಯುತ್ತೇನೆ ಎಂದರೂ ವೈವಾಹಿಕ ಜೀವನದ ಸಂದರ್ಭದಲ್ಲಿ ಏನಾದರೂ ಬದಲಾವಣೆ ಆದರೂ ಆಗಬಹುದು. ನೋಡೋಣ, ಸಂದರ್ಭ ಹೇಗಿರುತ್ತದೆ ಎನ್ನುವುದರ ಮೇಲೆ ನಿರ್ಧಾರ ಕೈಗೊಳ್ಳುತ್ತೇನೆ.

**◆ ಮುಂದೆ ದೊಡ್ಡ ಸೆಲೆಬ್ರಿಟಿ ಆದರೆ ನಿಮ್ಮ ಹೊಣೆಗಾರಿಕೆ ಏನು ಎಂದು ಭಾವಿಸುತ್ತೀರಿ?**

ಯಾವುದೇ ಒಬ್ಬ ಸೆಲೆಬ್ರಿಟಿಗೆ ಜನಪ್ರಿಯತೆ ಮತ್ತು ಗೌರವ ಸಿಗುವುದು ಸಮಾಜದಿಂದ. ಜನರೇ ಸೆಲೆಬ್ರಿಟಿಗಳಿಗೆ ಹೆಸರು– ಸಂಪತ್ತನ್ನು ಕೊಟ್ಟಿರುತ್ತಾರೆ. ಹಾಗಾಗಿ ಅಂತಹ ಅವಕಾಶ ಸಿಕ್ಕರೆ ಸಮಾಜಮುಖಿ ಕೆಲಸ ಮಾಡುವ ಪ್ರಯತ್ನ ಮಾಡುತ್ತೇನೆ.

**◆ ನಿಮ್ಮ ಹವ್ಯಾಸದ ಬಗ್ಗೆ ಹೇಳುವುದಾದರೆ...**

ಸಂಪೂರ್ಣ ಸಸ್ಯಾಹಾರಿ ಆಗಿದ್ದರಿಂದ ಅದರಲ್ಲೇ ವೈವಿಧ್ಯದ ಆಹಾರವನ್ನು ಸವಿಯುತ್ತೇನೆ. ಚಾಕೋಲೆಟ್ ತುಂಬ ಇಷ್ಟ. ಇಂಗ್ಲಿಷ್ ಸಾಹಿತ್ಯವನ್ನು ಓದುವ ಹವ್ಯಾಸ ಇದೆ. ಸಿನಿಮಾವನ್ನು ನೋಡುತ್ತೇನೆ. ಶಾಸ್ತ್ರೀಯ ಅಧ್ಯಯನ ಮಾಡಿಲ್ಲ, ಆದರೂ ನನ್ನ ಖುಷಿಗೆ ಹಾಡುತ್ತೇನೆ. ಪೆಂಟರ್ ಅಲ್ಲ, ಆದರೂ ಕುಂಚದಲ್ಲಿ ಒಂದಿಷ್ಟು ಆಟವಾಡುತ್ತೇನೆ.

**◆ ವೃತ್ತಿ ಬದುಕು ಬದಲಾಗಿದ್ದು, ಅವಕಾಶ ಸಿಕ್ಕಿದ್ದು ಹೇಗೆ? ಮೊದಲ ದಿನ ಚಿತ್ರೀಕರಣ ಹೇಗಿತ್ತು?**

'ನವತಾರೆ' ಎನ್ನುವ ಸ್ಪರ್ಧೆಯಲ್ಲಿ ಭಾಗವಹಿಸಲು ಹೋಗಿದ್ದೆ. ಅಂದು ರಜೆ ಇದ್ದಿದ್ದರಿಂದ ಹೋಗಿದ್ದೆ. ಅಲ್ಲಿ ಒಬ್ಬರು ನನ್ನನ್ನು ನೋಡಿ ಫೋನ್ ನಂಬರ್ ತೆಗೆದುಕೊಂಡಿದ್ದರು. ಅವತ್ತು ಸಂಜೆಯೇ ಚಾನೆಲ್‌ನಿಂದ ಫೋನ್ ಬಂತು. ಆಡಿಷನ್ ಇದೆ ಬಂದು ಭಾಗವಹಿಸಿ ಎಂಬ ಸಂದೇಶವನ್ನೂ ಅವರು ನೀಡಿದರು. ನನಗೆ ಅಭಿನಯದ ಹಿನ್ನೆಲೆಯೇ ಇಲ್ಲ ಆದರೂ ಪ್ರಯತ್ನ ಮಾಡುತ್ತೇನೆ ಎಂದೆ. ನನ್ನನ್ನು ಆಯ್ಕೆ ಮಾಡಿದರು. ಒಂದು ವಾರ ಕಾರ್ಯಾಗಾರ ಏರ್ಪಡಿಸಿದರು. ಅದೇ ನನ್ನ ಮೊದಲ ಆಡಿಷನ್. ರಂಗಭೂಮಿಯ ಹಿನ್ನೆಲೆಯಾಗಲಿ, ಅಭಿನಯದ ಅನುಭವವಾಗಲಿ ಇಲ್ಲ ಎಂದು ಗೊತ್ತಿದ್ದರೂ ನನಗೊಂದು ಅವಕಾಶ ನೀಡಿದ್ದಾರೆ. ಪಾತ್ರಕ್ಕೆ ನ್ಯಾಯವನ್ನು ಒದಗಿಸುವುದು ನನ್ನ ಕರ್ತವ್ಯ.

ಚಿತ್ರೀಕರಣದ ಮೊದಲ ದಿನ ಹೆಚ್ಚು ಚಿತ್ರೀಕರಣ ಮಾಡಲಿಲ್ಲ. ಅವತ್ತು ಔಪಚಾರಿಕ ಕೆಲಸಗಳು ಹೆಚ್ಚಿದ್ದವು. ನನಗೆ ಕ್ಯಾಮೆರಾ ಭಯವನ್ನು ಹುಟ್ಟಿಸಿರಲಿಲ್ಲ. ಪಾತ್ರವನ್ನು ಅರ್ಥ ಮಾಡಿಕೊಳ್ಳಲು ಸ್ವಲ್ಪ ಸಮಯ ಬೇಕಾಯಿತು. ಚೆನ್ನಾಗಿ ಮೂಡಿ ಬರಬೇಕು ಎನ್ನುವ ಒತ್ತಡ ಸ್ವಲ್ಪ ಗಲಿಬಿಲಿಯನ್ನು ಮೂಡಿಸಿತ್ತು.

■ **ರಾಘವೇಂದ್ರ ಕೆ.**